### ಇ) ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು – ಎನ್. ಎಫ್. ಎಸ್. ಎಮ್.

| ಕ್ರ. ಸಂ. | ಬೆಳೆ | ಪ್ರಾತ್ಯಕ್ಷಿಕೆಯ ಹೆಸರು | ಪ್ರಾತ್ಯಕ್ಷಿಕೆಯ ಸಂಖ್ಯೆ | ಗ್ರಾಮಗಳು |
|---|---|---|---|---|
| 1. | ಜೋಳ | ಎಸ್.ಪಿ.ವಿ–2217 ಜೋಳದ ತಳಿಯ ಪ್ರಾತ್ಯಕ್ಷಿಕೆ | 30 | ಬ್ಯಾಡಗಿ, ಕಜ್ಜರಿ, ತುಮ್ಮಿಕೊಪ್ಪ |
| 2. | ನವಣೆ | ನವಣೆ (ಡಿ.ಹೆಚ್.ಎಫ್.ಟಿ–109–3) ಹೊಸ ತಳಿಯ ಪ್ರಾತ್ಯಕ್ಷಿಕೆ | 20 | ಮುಗಳಿ, ತಿಮ್ಮಾಪುರ |
| 3. | ಸಾವೆ | ಸಾವೆ (ಡಿ.ಹೆಚ್.ಎಲ್.ಎಮ್–36–3) ಹೊಸ ತಳಿಯ ಪ್ರಾತ್ಯಕ್ಷಿಕೆ | 20 | ಮುಗಳಿ |

### ಈ) ಗುಚ್ಛ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

| ಕ್ರ. ಸಂ. | ಬೆಳೆ | ಪ್ರಾತ್ಯಕ್ಷಿಕೆಯ ಹೆಸರು | ಪ್ರಾತ್ಯಕ್ಷಿಕೆಯ ಸಂಖ್ಯೆ | ಗ್ರಾಮಗಳು |
|---|---|---|---|---|
| 1. | ಶೇಂಗಾ | ಶೇಂಗಾ ಬೇಸಿಗೆ ಬೆಳೆಯ ಪ್ರಾತ್ಯಕ್ಷಿಕೆ | 30 | ಎತ್ತಿನಹಳ್ಳಿ, ನಿಡನೇಗಲು |
| 2. | ಕಡಲೆ | ಕಡಲೆ ಬೆಳೆಯ ಪ್ರಾತ್ಯಕ್ಷಿಕೆ | 30 | ನೆಗಳೂರು, ಹಾಲಗಿ |

### ಈ) ಗುಚ್ಛ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

| ಕ್ರ. ಸಂ. | ಬೆಳೆ | ಪ್ರಾತ್ಯಕ್ಷಿಕೆಯ ಹೆಸರು | ಪ್ರಾತ್ಯಕ್ಷಿಕೆಯ ಸಂಖ್ಯೆ | ಗ್ರಾಮಗಳು |
|---|---|---|---|---|
| 1. | ಸೂರ್ಯಕಾಂತಿ | ಸೂರ್ಯಕಾಂತಿ (ಆರ್.ಎಸ್.ಎಫ್.ಹೆಚ್.130) ಬೆಳೆಯ ಪ್ರಾತ್ಯಕ್ಷಿಕೆ | 46 | ಹಾಲಗಿ, ಗುತ್ತಲ, ಶಿಡೇನೂರು, ಬ್ಯಾಡಗಿ |

### ತರಬೇತಿ ಕಾರ್ಯಕ್ರಮಗಳು:

ಕೇಂದ್ರದಲ್ಲಿ ರೈತರ ಕುರಿತು ವಿವಿಧ ತಾಂತ್ರಿಕ ವಿಷಯಗಳ ಆಧಾರಿತ ಒಳ ಆವರಣ ಹಾಗೂ ಹೊರ ಅವರಣ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಮುಖ್ಯವಾಗಿ ಕೃಷಿ ಉಪಕರಣಗಳ ಬಳಕೆ, ಸಸ್ಯ ಸಂರಕ್ಷಣಾ ಕ್ರಮಗಳು, ಮುಂಗಾರು ಕೃಷಿ ಜಾಗೃತಿ ಕಾರ್ಯಕ್ರಮ, ಸೂರ್ಯಕಾಂತಿ ಬೆಳೆಯಲ್ಲಿ ನೀರು ನಿರ್ವಹಣೆ, ಸಿರಿಧಾನ್ಯ ಬೆಳೆಗಳ ಬೇಸಾಯ ಕ್ರಮಗಳು ಮತ್ತು ಮೌಲ್ಯವರ್ಧನೆ, ನವಣೆ ಬೆಳೆಯ ಬೇಸಾಯ ಕ್ರಮಗಳು, ಮಣ್ಣು ಪರೀಕ್ಷೆ ಮತ್ತು ಫಲವತ್ತತೆ ರಕ್ಷಣೆ ಹಾಗೂ ಇನ್ನಿತರ ವಿಷಯಗಳ ಕುರಿತು ರೈತರಿಗೆ ಉಪಯುಕ್ತವಾದ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.


ಪ್ರಕಾಶಕರು
**ಡಾ. ಸರೋಜನಿ ಜೆ ಕರಕಣ್ಣವರ**
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಂಪಾದಕರು : ಡಾ. ಎಸ್.ಎ. ಅಷ್ಟಪುತ್ರೆ
ಸಹ ಸಂಪಾದಕರು : ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ
ಡಾ. ಅರ್ಚನಾ ಬಿ
ವಿನ್ಯಾಸ : ಕು. ರೇಖಾ ಕೆ. ಎನ್.
ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ


ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಮುದ್ರಿತ ವಿಷಯ


ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ|| ರಾಣೇಬೆನ್ನೂರು, ಜಿ|| ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)


ಗೆ,

ಪಿನ್ ಕೋಡ್




ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org Email:kvk_haveri@rediffmail.com

ಜುಲೈ-ಸೆಪ್ಟೆಂಬರ್ 2015 ಸಂಪುಟ-14 ಸಂಚಿಕೆ-3


## "ಮಣ್ಣು ಆರೋಗ್ಯ ಅಭಿಯಾನ 2015"





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 21.07.2015 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ದೇವಿಹೊಸೂರ, ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ "ಮಣ್ಣು ಆರೋಗ್ಯ ಅಭಿಯಾನ 2015" ಅಂಗವಾಗಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ರೈತರಿಗೆ ಆರ್ಥಿಕ ಭದ್ರತೆ ಹಾಗೂ ಆತ್ಮಸ್ಥೈರ್ಯ ತುಂಬುವಲ್ಲಿ ಕೃಷಿ ತಂತ್ರಜ್ಞಾನಗಳ ಸಮರ್ಥ ಬಳಕೆಯ ಬಗ್ಗೆ ತಿಳಿಸಿದರು ಮತ್ತು ಕೃಷಿ ವಿಜ್ಞಾನ ಕೇಂದ್ರದಲ್ಲಿ ದೊರೆಯುವ ಪ್ರಯೋಜನಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಸಸ್ಯರೋಗ ಶಾಸ್ತ್ರಜ್ಞರಾದ ಡಾ. ಎಸ್.ಎ. ಅಷ್ಟಪುತ್ರೆಯವರು ಮಣ್ಣಿನಿಂದ ಪ್ರಸಾರವಾಗುವ ರೋಗಗಳು ಮತ್ತು ಅವುಗಳ ಹತೋಟಿ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಮಣ್ಣು ವಿಜ್ಞಾನಿಗಳಾದ ಡಾ. ಬಿ.ಆರ್. ಜಗದೀಶರವರು ಮಣ್ಣು ಆರೋಗ್ಯ, ಮಣ್ಣು ಮಾದರಿ ಸಂಗ್ರಹಣೆ ಹಾಗೂ ವಿಶ್ಲೇಷಣೆ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು ಹಾಗೂ ಮಣ್ಣು ಮಾದರಿ ತೆಗೆಯುವ ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಡಾ. ಸಿ.ಪಿ. ಹಿರೇಮಠ ಹಾಗೂ ಶ್ರೀ ಶ್ರೀಕಾಂತರವರು ಉಪಸ್ಥಿತರಿದ್ದರು.

ಸಹಾಯ ಕೃಷಿ ನಿರ್ದೇಶಕರುಗಳಾದ ಶ್ರೀಮತಿ ಸುಚೇತಾ ಹೆಬ್ಬಳ್ಳಿ ಇವರು ಸ್ವಾಗತಿಸಿದರು ಮತ್ತು ಶ್ರೀಮತಿ ಉಷಾ ಹೂಲಿ ಇವರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು. ಬ್ಯಾಡಗಿ ಮತ್ತು ಹಾವೇರಿ ತಾಲೂಕುಗಳಿಂದ ಸುಮಾರು 115 ರೈತರು/ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## "ಮುಂಗಾರು ಕೃಷಿ ಜಾಗೃತಿ ಕಾರ್ಯಕ್ರಮ"

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 04.08.2015ರಂದು "ಮುಂಗಾರು ಕೃಷಿ ಜಾಗೃತಿ ಕಾರ್ಯಕ್ರಮ, ವಸ್ತು ಪ್ರದರ್ಶನ, ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮತ್ತು ರೈತ ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬ್ಯಾಡಗಿ ಶಾಸಕರಾದ ಸನ್ಮಾನ್ಯ ಶ್ರೀ ಬಸವರಾಜ ಎನ್. ಶಿವಣ್ಣನವರ ಇವರು ದೇಶದ ಕೃಷಿ ಅಭಿವೃದ್ಧಿಯಲ್ಲಿ ಕೃಷಿ ವಿಜ್ಞಾನಿಗಳ ಪಾತ್ರವನ್ನು ವಿವರಿಸಿ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ತಿಳಿಸಿದರು. ಸಾವಯವ ಕೃಷಿಗೆ ಒತ್ತು ನೀಡಿ ಜೊತೆಗೆ ಇನ್ನಿತರ ಕೃಷಿ ಉಪಕಸುಬುಗಳನ್ನು ತಮ್ಮ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸೂಚಿಸಿದರು. ರೈತರ ಆತ್ಮಹತ್ಯೆಯ ಬಗ್ಗೆ ಕಳಕಳಿ ವ್ಯಕ್ತಪಡಿಸಿ ರೈತರು ತಮ್ಮ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದಂತೆ ಕರೆನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನರವರಾದ ಡಾ. ಎಸ್.ಐ. ಹಾಳಿಕಟ್ಟಿ ಇವರು ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಸಿಕೊಂಡು ಮಣ್ಣು ಹಾಗೂ ನೀರು ಸಂರಕ್ಷಣೆಗೆ ವಿಧಾನಗಳನ್ನು ಸೂಚಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ.ವ್ಹಿ. ನಾಟೀಕರ ರವರು ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಜೊತೆಗೆ ಕೃಷಿ ಉಪಕಸುಬುಗಳನ್ನು ರೂಢಿಸಿಕೊಳ್ಳಲು ಕರೆನೀಡಿದರು. ನಂತರ ಕೃಷಿ ವಿಜ್ಞಾನಿಗಳು ಮುಂಗಾರು ಕೃಷಿ ತಾಂತ್ರಿಕತೆಗಳ ಸೂಕ್ತ ಅಳವಡಿಕೆಗಳ ಬಗ್ಗೆ ರೈತರನ್ನು ಕುರಿತು ಸಂವಾದ ಕಾರ್ಯಕ್ರಮದಲ್ಲಿ ಸವಿಸ್ತಾರವಾಗಿ ಚರ್ಚಿಸಿದರು.

ಈ ಸಂದರ್ಭದಲ್ಲಿ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರ, ಜೈವಿಕ ಇಂಧನ ಘಟಕ ಹಾಗೂ ಕೃಷಿ ಇಲಾಖೆ, ರೇಶ್ಮೆ ಇಲಾಖೆ, ಶಿವಾ ಟ್ರ್ಯಾಕ್ಟರ್ಸ ಇವರು ವಸ್ತು ಪ್ರದರ್ಶನವನ್ನು ಏರ್ಪಡಿಸಿದ್ದರು.

ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ಸಭಿಕರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿ ಕಾರ್ಯಕ್ರಮದ ವಿವರ ನೀಡಿದರು. ಡಾ. ಎಸ್.ಎ. ಅಷ್ಟಪುತ್ರೆಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಕೇಂದ್ರದ ಹಿರಿಯ ವಿಜ್ಞಾನಿಯಾದ ಶ್ರೀ ಮಲ್ಲಿಕಾರ್ಜುನಪ್ಪ ಗೌಡ ಇವರು ವಂದನಾರ್ಪಣೆ ಸಲ್ಲಿಸಿದರು.

ಕಜ್ಜರಿ, ಅಸುಂಡಿ, ಕಾಕೋಳ, ಕೂನಬೇವು, ಕದರಮಂಡಲಗಿ ಗ್ರಾಮಗಳಿಂದ ಸುಮಾರು 150 ಕ್ಕೂ ಹೆಚ್ಚು ರೈತರು/ರೈತ ಮಹಿಳೆಯರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 39 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ

ದಿನಾಂಕ : 09.09.2015 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಜರುಗಿದ 39 ನೇಯ ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ಕೃಷಿ ವಿಶ್ವವಿದ್ಯಾಲಯ ಧಾರವಾಡ ಶಿಕ್ಷಣ ನಿರ್ದೇಶಕರಾದ ಡಾ. ಬಿ.ಎಮ್. ಖಾದಿಯವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆವಹಿಸಿ ಮಾತಾಡಿದ ಶಿಕ್ಷಣ ನಿರ್ದೇಶಕರಾದ ಡಾ. ಬಿ.ಎಂ. ಖಾದಿಯವರು ಬೆಳೆಗಳ ಸಮಸ್ಯೆ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಸಲಹೆ ನೀಡಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣನವರ ಇವರು ಕೇಂದ್ರದಲ್ಲಿ ಕೈಗೊಂಡ ವಿವಿಧ ತಾಂತ್ರಿಕ ಚಟುವಟಿಕೆಗಳ ಬಗ್ಗೆ ಸಭಿಕರನ್ನುದ್ದೇಶಿಸಿ ವರದಿ ಮಂಡಿಸಿದರು. ಸಭೆಯಲ್ಲಿ ಭಾಗವಹಿಸಿದ ಸಲಹಾ ಸಮಿತಿಯ ಸದಸ್ಯರುಗಳಾದ ವಲಯ ನಿರ್ದೇಶಕರ ಕಛೇರಿ, ಬೆಂಗಳೂರು ಪ್ರತಿನಿಧಿಯಾದ ವಿಜ್ಞಾನಿ ಡಾ. ಜ್ಞಾನೇಶ್ವರ ಕೋಳೆಕರ, ಕೃ.ವಿ.ವಿ. ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ. ಅಯ್. ಬೆಣಗಿ, ಸಹ ಸಂಶೋಧನಾ ನಿರ್ದೇಶಕರಾದ ಡಾ. ಮಡಿವಾಳರ್, ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ. ವ್ಹಿ. ನಾಟಿಕರ್, ಡಾ. ಆರ್. ಎ. ಬಾಳೆಕಾಯಿ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಮತ್ತು ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪ್ರಗತಿ ಪರ ರೈತರು ಸಭೆಯಲ್ಲಿ ಭಾಗವಹಿಸಿ ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳ ಬಗ್ಗೆ ಸಲಹೆ, ಸೂಚನೆಗಳನ್ನು ನೀಡಿದರು. ಕೇಂದ್ರದ ವಿಜ್ಞಾನಿಯಾದ ಡಾ. ಎಸ್. ಎ. ಅಷ್ಟಪುತ್ರೆಯವರು ವಂದನಾರ್ಪಣೆ ಸಲ್ಲಿಸಿದರು.





## ಸಾಧನೆಗೆ ಸಂದ ಗೌರವೆ

ದಿನಾಂಕ 27.09.2015 ರಿಂದ 30.09.2015ರ ವರೆಗೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಆಯೋಜಿಸಲಾಗಿದ್ದ ಕೃಷಿ ಮೇಳ–2015 ರಲ್ಲಿ ಉತ್ತರ ಕರ್ನಾಟಕದ 7 ಜಿಲ್ಲೆಗಳ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ "ಶ್ರೇಷ್ಠ ಕೃಷಿಕ " ಮತ್ತು "ಶ್ರೇಷ್ಠ ಕೃಷಿ ಮಹಿಳೆ" ಹಾಗೂ ವಿವಿಧ ತಾಲ್ಲೂಕುಗಳಿಂದ ಆಯ್ಕೆಯಾದ ಶ್ರೇಷ್ಠ ಯುವ ಕೃಷಿಕ ಮತ್ತು ಶ್ರೇಷ್ಠ ಯುವ ಕೃಷಿ ಮಹಿಳೆಯರಿಗೆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹಾವೇರಿ ಜಿಲ್ಲೆಯ ಶ್ರೀ ಸಿದ್ದಲಿಂಗೇಶ್ವರ ವೀರಪ್ಪ ಕಲಿವಾಳ, ಇಬ್ರಾಹಿಂಪುರ, ಶಿಗ್ಗಾವಿ ತಾಲೂಕು ಇವರಿಗೆ "ಶ್ರೇಷ್ಠ ಕೃಷಿಕ" ಎಂದು ಮತ್ತು ಶ್ರೀಮತಿ ರೇಖಾ ಶಿವಕುಮಾರ ಶಿಡಗನಾಳ, ಕಾಕೋಳ, ರಾಣೇಬೆನ್ನೂರು ತಾಲೂಕು ಇವರಿಗೆ "ಶ್ರೇಷ್ಠ ಕೃಷಿ ಮಹಿಳೆ" ಯೆಂದು ಕೃಷಿ ವಿ.ವಿ. ಧಾರವಾಡದ ಕೃಷಿ ಮೇಳ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಯಿತು.

**ಶ್ರೇಷ್ಠ ಕೃಷಿಕ**



ಶ್ರೀ ಸಿದ್ದಲಿಂಗೇಶ್ವರ ವೀರಪ್ಪ ಕಲಿವಾಳ,
ಇಬ್ರಾಹಿಂಪುರ, ಶಿಗ್ಗಾವಿ

**ಶ್ರೇಷ್ಠ ಕೃಷಿ ಮಹಿಳೆ**



ಶ್ರೀಮತಿ ರೇಖಾ ಶಿವಕುಮಾರ ಶಿಡಗನಾಳ
ಕಾಕೋಳ, ರಾಣೇಬೆನ್ನೂರು

### ಶ್ರೇಷ್ಠ ಯುವ ಕೃಷಿಕರು



ಶ್ರೀ ಮುತ್ತೇಶ ಶಿವಪ್ಪ ಬಿದರಣ್ಣನವರ,
ಸಾ: ಆಲದಕಟ್ಟಿ ತಾ: ಹಾನಗಲ್ಲ



ಶ್ರೀ ಶರಣಪ್ಪ ಗದಿಗೆಪ್ಪ ಕಿವುಡನವರ
ಸಾ: ಸದಾಶಿವಪೇಟೆ ತಾ: ಶಿಗ್ಗಾಂವ



ಶ್ರೀ ಚಂದ್ರಶೇಖರ ನಾಗಪ್ಪಾ ಛತ್ರದ
ಸಾ: ಬ್ಯಾಡಗಿ ತಾ: ಬ್ಯಾಡಗಿ



ಶ್ರೀ ನಾಗನಗೌಡ ರಾಮನಗೌಡ ಕಾಕಡೆ
ಸಾ: ಹಾಲಗಿ ತಾ:ಹಾವೇರಿ



ಶ್ರೀ ಗಣೇಶ ನಿಂಗಪ್ಪ ಮುದ್ದಿ
ಸಾ: ಇಟಗಿ, ತಾ: ರಾಣೆಬೆನ್ನೂರು



ಶ್ರೀ ಶಿವದೇವಗೌಡ ವೀರಭದ್ರಗೌಡ ಪಾಟೀಲ
ಸಾ: ನದಿನೀರಲಗಿ, ತಾ: ಸವಣೂರು



ಶ್ರೀ ಚೇತನ ಮೋಹನರಾವ ಜಗತಾಪ,
ಸಾ: ಮಾಸೂರ ತಾ: ಹಿರೇಕೆರೂರು



### ಶ್ರೇಷ್ಠ ಯುವ ಕೃಷಿಕರು



ಶ್ರೀಮತಿ ಮಂಜವ್ವ ಮುನೇಶ ವಾಲ್ಮೀಕಿ
ಸಾ: ಹಿರೇಮಲ್ಲೂರು, ತಾ:ಶಿಗ್ಗಾಂವ



ಶ್ರೀಮತಿ ಸವಿತಾ ದೇವೇಂದ್ರಪ್ಪ ದಾಳೀರ
ಸಾ: ಸಮ್ಮಸಗಿ, ತಾ: ಹಾನಗಲ್ಲ



ಶ್ರೀಮತಿ ಅನ್ನಪೂರ್ಣ ಚನ್ನವೀರಗೌಡ ಪಾಟೀಲ
ಸಾ: ಇಂಗಳಗುಂದಿ, ತಾ: ಬ್ಯಾಡಗಿ



ಶ್ರೀಮತಿ ಸುಧಾ ಆನಂದಸ್ವಾಮಿ ಕುಲಕರ್ಣಿ
ಸಾ: ಹಾಲಗಿ, ತಾ: ಹಾವೇರಿ



ಶ್ರೀಮತಿ ಶಶಿಕಲಾ (ಸಿದ್ದವ್ವ) ಬಸವರಾಜ ಮುದ್ದಪ್ಪಳವರ
ಸಾ: ಜೋಯಿಸರ ಹರಳಹಳ್ಳಿ, ತಾ: ರಾಣೇಬೆನ್ನೂರು



ಶ್ರೀಮತಿ ಶೋಭಾ ಮಂಜಪ್ಪ ಸಂಕಪ್ಪನವರ
ಸಾ: ಯಲುವಿಗಿ, ತಾ:ಸವಣೂರು



ಶ್ರೀಮತಿ ಅನಿತಾ ಸುರೇಶ ನಲವಡಿ,
ಸಾ: ಮಾಸೂರು, ತಾ: ಹಿರೇಕೆರೂರು

## 2015–16 ನೇ ಸಾಲಿಗೆ ಮಂಜೂರಾದ ಕ್ಷೇತ್ರ ಪ್ರಯೋಗಗಳು ಹಾಗೂ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

### ಅ) ಸಮಸ್ಯಾಧಾರಿತ ಕ್ಷೇತ್ರ ಪ್ರಯೋಗಗಳು

| ಕ್ರ. ಸಂ. | ಬೆಳೆ | ಕ್ಷೇತ್ರ ಪ್ರಯೋಗಗಳ ಹೆಸರು | ಕ್ಷೇತ್ರ ಪ್ರಯೋಗಗಳ ಸಂಖ್ಯೆ | ಗ್ರಾಮಗಳು |
|---|---|---|---|---|
| 1. | ಶೇಂಗಾ | ಡಿ.ಹೆಚ್–101 ಶೇಂಗಾ (ಬೇಸಿಗೆ) ತಳಿಯ ಕ್ಷೇತ್ರ ಪರೀಕ್ಷೆ | 05 | ಮಾಸೂರು |
| 2. | ಈರುಳ್ಳಿ | ಈರುಳ್ಳಿಯಲ್ಲಿ ನೇರಳೆ ಎಲೆಮಚ್ಚೆ ರೋಗ ಹಾಗೂ ಥ್ರಿಪ್ಸ್ ನುಸಿಯ ನಿರ್ವಹಣೆ ಕ್ಷೇತ್ರ ಪರೀಕ್ಷೆ | 05 | ಕಜ್ಜರಿ |

### ಆ) ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

| ಕ್ರ. ಸಂ. | ಬೆಳೆ | ಪ್ರಾತ್ಯಕ್ಷಿಕೆಯ ಹೆಸರು | ಪ್ರಾತ್ಯಕ್ಷಿಕೆಯ ಸಂಖ್ಯೆ | ಗ್ರಾಮಗಳು |
|---|---|---|---|---|
| 1. | ಗುರೆಳ್ಳಿ | ಗುರೆಳ್ಳಿನಲ್ಲಿ ಡಿ.ಎನ್.ಎಸ್–4 ಹೊಸ ತಳಿಯ ಪ್ರಾತ್ಯಕ್ಷಿಕೆ | 10 | ಡೊಂಬರಮತ್ತೂರು |
| 2. | ಕಬ್ಬು | ಸುಸ್ಥಿರ ಕಬ್ಬು ಕೃಷಿಯ ಪ್ರಾತ್ಯಕ್ಷಿಕೆ | 03 | ಹಾಲಗಿ |
| 3. | ಈರುಳ್ಳಿ | ಈರುಳ್ಳಿಯಲ್ಲಿ ಆಗ್ರಿ ಪೌಂಡ್ ಲೈಟ್ ರೆಡ್ ತಳಿಯ ಪ್ರಾತ್ಯಕ್ಷಿಕೆ | 10 | ಇಟಗಿ, ಬ್ಯಾಡಗಿ |
| 4. | ಟೊಮ್ಯಾಟೊ | ಟೊಮ್ಯಾಟೊ ಬೆಳೆಯಲ್ಲಿ ಅರ್ಕಾ ರಕ್ಷಕ ತಳಿಯ ಪ್ರಾತ್ಯಕ್ಷಿಕೆ | 05 | ಕಾಕೋಳ |
| 5. | ಅಲಸಂದಿ | ಅಲಸಂದಿ ಬೆಳೆಯಲ್ಲಿ ಕಾಸಿ ಕಾಂಚನ ತಳಿಯ ಪ್ರಾತ್ಯಕ್ಷಿಕೆ | 05 | ಹಾಲಗಿ |
| 6. | ಮೆಣಸಿನಕಾಯಿ | ಮೆಣಸಿನ ಕಾಯಿ ಎಲೆ ಮುಟುರು ರೋಗದ ನಿರ್ವಹಣೆ ಪ್ರಾತ್ಯಕ್ಷಿಕೆ | 10 | ಮಾಸೂರು |
| 7. | ನವಣೆ ಶಾವಿಗೆ | ಆದಾಯೋತ್ಪನ್ನ ಚಟುವಟಿಕೆಯಾಗಿ ನವಣೆ ಶಾವಿಗೆ ತಯಾರಿಕೆಯ ಪ್ರಾತ್ಯಕ್ಷಿಕೆ | 05 | ತಿಮ್ಮಾಪುರ, ರಾಣೇಬೆನ್ನೂರು |
| 8. | ರಾಗಿ ಶಾವಿಗೆ | ಆದಾಯೋತ್ಪನ್ನ ಚಟುವಟಿಕೆಯಾಗಿ ರಾಗಿ ಶಾವಿಗೆ ತಯಾರಿಕೆಯ ಪ್ರಾತ್ಯಕ್ಷಿಕೆ | 05 | ತಿಮ್ಮಾಪುರ, ರಾಣೇಬೆನ್ನೂರು |